


International Journal of Kannada Research
www.kannadajournal.com

**ISSN: 2454–5813**
IJKR 2018; 4(3): 11-13
© 2018 IJKR
www.kannadajournal.com
Received: 04-05-2018
Accepted: 05-06-2018

**ಡಾ. ಶ್ವೇತಾರಾಣಿ. ಎಚ್**
ಸಹಾಯಕ ಪ್ರಾಧ್ಯಾಪಕಿ
ಮರಿಯಪ್ಪ ಪ್ರಥಮ ದರ್ಜೆ
ಕಾಲೇಜು ಬೆಂಗಳೂರು

**Correspondence**
**ಡಾ. ಶ್ವೇತಾರಾಣಿ. ಎಚ್**
ಸಹಾಯಕ ಪ್ರಾಧ್ಯಾಪಕಿ
ಮರಿಯಪ್ಪ ಪ್ರಥಮ ದರ್ಜೆ
ಕಾಲೇಜು ಬೆಂಗಳೂರು

# ಪ್ರೇಮಾ ಭಟ್ ಅವರ ಅಂಕಣ ಬರಹದ ಔಚಿತ್ಯ

**ಡಾ. ಶ್ವೇತಾರಾಣಿ. ಹೆಚ್**

ವೈಚಾರಿಕತೆಯನ್ನು ಬೋಧಿಸುವ ಶಿಕ್ಷಣ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಪಾಲಿಗೆ ವಿಳಂಬವಾಗಿ ದೊರಕಿತು. ಶಿಕ್ಷಣ ಪ್ರತಿಫಲದಿಂದಾಗಿ ಸ್ತ್ರೀಯರ ಚಿಂತನ ಕ್ರಮಗಳಲ್ಲಿ ಬದಲಾವಣೆಗಳು ಕಂಡುಬಂದವು. ಅಂತೆಯೇ ಪುರಾಣದ ಅಧ್ಯಯನ, ಮರು ವ್ಯಾಖ್ಯಾನ ಮತ್ತು ಮರುಸೃಷ್ಟಿಯ ಕಾರ್ಯದಲ್ಲಿ ಮಹಿಳೆಯರು ತೀರಾ ತಡವಾಗಿ ತೊಡಗಿಕೊಂಡರು. ಇದರ ಪ್ರತಿಫಲವಾಗಿ ಮೂಡಿಬಂದ ಬರಹಗಳಲ್ಲಿ ಪ್ರೇಮಾಭಟ್ ಅವರ ಅಂಕಣ ಬರಹವೂ ಸೇರ್ಪಡೆಯಾಗಿದೆ.

ಪೌರಾಣಿಕ ವಸ್ತುವನ್ನು ಒಳಗೊಂಡಿರುವ ‘ಕೃಷ್ಣ ಮತ್ತು ಮಹಿಳೆ’ ಅಂಕಣ ಬರಹದಲ್ಲಿ ಆದರ್ಶ ಪುರುಷನ ಕಲ್ಪನೆಯನ್ನು ಕೃಷ್ಣನ ಮೂಲಕ ಚಿತ್ರಿಸಿದ್ದಾರೆ. ಆದರ್ಶ ಪುರುಷ ಎನಿಸಿಕೊಳ್ಳುವ ಕೃಷ್ಣನ ಹಿಂದೆ ಇದ್ದ ಗೋಪಿಕಾ ವರ್ಗವನ್ನು ಗುರುತಿಸಿದ್ದಾರೆ. ಮಹಾಭಾರತದಲ್ಲಿ ಪುರುಷ ಪಾತ್ರಗಳು ವಿಜೃಂಭಿಸುತ್ತವೆ. ಆದರೆ ಇಲ್ಲಿ ನಗಣ್ಯವಾಗಿದ್ದ ಮಹಿಳಾ ಪಾತ್ರಗಳನ್ನು ಪ್ರಧಾನ ಭೂಮಿಕೆಗೆ ತರಲಾಗಿದೆ. ಕೃಷ್ಣ ತನ್ನ ಹೆಂಡತಿಯರ ಸಂಕುಚಿತ ಭಾವನೆಗಳನ್ನು ಧನಾತ್ಮಕವಾಗಿ ಅರ್ಥೈಸಿಕೊಂಡು ಪ್ರೀತಿ ಹಂಚುವ ಪತಿಯಾಗಿ ಚಿತ್ರಣ ಗೊಂಡಿದ್ದಾನೆ. ಹೆಣ್ಣಿನ ತಾಯ್ತನ, ಆ ತಾಯ್ತನವೇ ಸಾಮಾನ್ಯನಾದ ಕೃಷ್ಣನನ್ನು ದೈವೀಕರಿಸುವ ಪ್ರಕ್ರಿಯೆಯನ್ನು ಇಲ್ಲಿ ಕಾಣಬಹುದು. ಒಬ್ಬ ಸಾಮಾನ್ಯ ಗೋಪಿಕೆಯಲ್ಲಿಯೂ ಮಹತ್ತರವಾಗಿ ಪ್ರೇಮವನ್ನು ಚಿತ್ರಿಸಿದ್ದಾರೆ.

ಸನ್ಯಾಸಿನಿ ಗೃಹಿಣಿಯಾದದ್ದು ತಪ್ಪಲ್ಲ ಆದರೆ ? ಎಂಬ ಅಂಕಣ ಬರಹವು ಪ್ರಸ್ತುತ ಧಾರ್ಮಿಕ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ಸನ್ಯಾಸಿಯ ಮುಖವಾಡ ಧರಿಸಿ ಸ್ವಹಿತ ಕಾಯ್ದುಕೊಳ್ಳುತ್ತಿರುವ ಮನುಷ್ಯರ ಸ್ವಾರ್ಥ ವರ್ತನೆಯ ನಡುವೆ ಒಬ್ಬ ಸನ್ಯಾಸಿನಿ ತೆಗೆದುಕೊಳ್ಳುವ ದಿಟ್ಟ ನಿರ್ಧಾರದ ಬಗ್ಗೆ ಮೆಚ್ಚುಗೆಯ ನುಡಿಗಳಿವೆ. ಆದರೆ ಆಕೆ ವಿವಾಹವಾಗಲು ಆಯ್ಕೆ ಮಾಡಿಕೊಂಡ ಯುವಕನ ವಯಸ್ಸಿನ ಬಗ್ಗೆ ಆಕ್ಷೇಪವಿದೆ. ಗಂಡಿಗಿಂತ ಹೆಣ್ಣಿನ ವಯಸ್ಸು ಹೆಚ್ಚಾದಲ್ಲಿ ದಾಂಪತ್ಯ ಸುಖಮಯವಾಗಿರಲು ಸಾಧ್ಯವಿಲ್ಲ. ಏಕೆಂದರೆ ವಯಸ್ಸಾದರೂ ಪುರುಷರ ಲೈಂಗಿಕ ಪ್ರವೃತ್ತಿ ಕುಂಠಿತವಾಗುವುದಿಲ್ಲವೆಂಬ ವೈಜ್ಞಾನಿಕ ಕಾರಣವನ್ನು ತಿಳಿಸಿಕೊಡುತ್ತದೆ.

### ೬.೨.೩ ಕೌಟುಂಬಿಕ ಹಾಗೂ ನೈತಿಕ ಪ್ರಜ್ಞೆಯ ಅಂಕಣಗಳು

ಪ್ರೇಮಾಭಟ್ ಅವರ ‘ಗೃಹಿಣಿ’ಯಲ್ಲಿ ಕೌಟುಂಬಿಕ ಹಾಗೂ ನೈತಿಕ ಪ್ರಜ್ಞೆಯ ಅಂಕಣಗಳು ಸಂಕಲಿತಗೊಂಡಿವೆ. ಲೇಖಕಿ ಇಲ್ಲಿನ ಲೇಖನಗಳನ್ನು ಎರಡು ಪಾತ್ರಗಳ ಸಂಭಾಷಣೆಯ ಮೂಲಕ ಪ್ರತಿಮಾತ್ಮಕವಾಗಿ ನಿರೂಪಿಸಿದ್ದಾರೆ. ಮೊದಲನೆಯದು, ಪದವೀಧರೆ ನೌಕರಿ ಮಾಡುವ ಕನಸು ಹೊತ್ತ ಆರ್ಥಿಕ ಸ್ವಾತಂತ್ರ್ಯ ಬಯಸುವ ಹೆಣ್ಣಿನ ಪ್ರತಿಮೆ. ಎರಡನೆಯದು ಅಲ್ಪವಿದ್ಯಾವಂತ ಗೃಹಿಣಿಯ ಪ್ರತಿಮೆ. ಇಲ್ಲಿ ಗೃಹಿಣಿಯ ಪ್ರತಿಮೆಯ ಮೂಲಕ ದಾಂಪತ್ಯ, ಸಂಸಾರ, ಗಂಡ–ಮಕ್ಕಳು. ಅತ್ತೆ–ಮಾವಂದಿರ ಆರೈಕೆ ಮಾಡುವ ಆದರ್ಶ ಗೃಹಿಣಿಯ ಚಿತ್ರಣವನ್ನು ಕಟ್ಟಿಕೊಡಲಾಗಿದೆ. ಹೆಣ್ಣಿನ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ನೌಕರಿ ಮಾಡುವ ಮಹಿಳೆಯ ಪ್ರತಿಮೆಯ ಮೂಲಕ ಕಟ್ಟಿಕೊಡಲಾಗಿದೆ.

ಒಬ್ಬ ಸಾಮಾನ್ಯ ಗೃಹಿಣಿಗಿರುವ ಇಚ್ಛಾಶಕ್ತಿ ಅವಳಿಗೆ ಇರುವ ಸಾಮಾಜಿಕ ಜವಾಬ್ದಾರಿಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಒಂದು ಮನೆಯ ಆರ್ಥಿಕ ಸ್ಥಿತಿಯನ್ನು ಸಂಭಾಳಿಸುವ ಗೃಹಿಣಿ ದೇಶದ ಆರ್ಥಿಕ ಸ್ಥಿತಿ ಸುಧಾರಿಸಲು ಕೊಡುಗೆ ನೀಡಬಲ್ಲಳು ಎಂಬುದನ್ನು ‘ಆಭರಣ ಪ್ರಿಯ ಮಹಿಳೆಯರು’ ಅಂಕಣದಲ್ಲಿ ಕಾಣಬಹುದು. ದೇಶದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ ಎದುರಾದಾಗ ತನ್ನ ಕೊರಳ ಮಾಂಗಲ್ಯವನ್ನು

ದೇಶಕ್ಕಾಗಿ ನೀಡಿದ ಮಹಿಳೆಯ ಮನೋಭಾವ ಅನುಕರಣೀಯವಾದುದ್ದೆಂಬ ವಿಚಾರ ಮೂಡಿ ಬಂದಿದೆ. ಈ ಮೂಲಕ ಒಬ್ಬ ಸಾಮಾನ್ಯ ಗೃಹಿಣಿಯಲ್ಲಿರುವ ದೇಶಾಭಿಮಾನ ದೇಶದ ಹಿತಾಸಕ್ತಿಗಳ ಬಗ್ಗೆ ಗಮನಹರಿಸುವ ಮನೋಭಾವವನ್ನು ತೆರೆದಿಡುತ್ತದೆ. ಸ್ತ್ರೀಗೆ ಆಭರಣ ವ್ಯಾಮೋಹ ಸಹಜವಾದದ್ದಾದರೂ ದೇಶದ ಸಂಕಷ್ಟಕ್ಕಿಂತ ತನ್ನ ಆಭರಣ ವ್ಯಾಮೋಹ ದೊಡ್ಡದಲ್ಲ ಎಂಬ ಸಾಮಾನ್ಯ ಮಹಿಳೆಯ ಧ್ಯೇಯವನ್ನು ಇಲ್ಲಿ ಕಾಣಬಹುದು. ಅಂಕಣ ಬರಹಗಳ ಮುಖ್ಯ ಗುಣಗಳಾದ ಪ್ರಚಲಿತತೆ ಮತ್ತು ಪ್ರಸ್ತುತತೆಯನ್ನು ಇಲ್ಲಿನ ಅಂಕಣಗಳಲ್ಲಿ ಕಾಣಬಹುದು.

'ಹೆಣ್ಣೆಂದರೆ ತಾತ್ಸಾರವೇಕೆ?' ಎಂಬ ಅಂಕಣ ಬರಹವು ಮನೆಯಲ್ಲಿ ಮೂರು ಹೆಣ್ಣು ಮಕ್ಕಳಿದ್ದರೂ ಮತ್ತೊಂದು ಹೆಣ್ಣು ಜನಿಸಲಿ ಎನ್ನುವ ಅತ್ತೆಯ ಭಾವನೆಯನ್ನು ಸೌಹಾರ್ದಯುತವಾಗಿ ಪರಿಚಯಿಸುತ್ತದೆ. ಈ ಮೂಲಕ ಭೂತವನ್ನು ನೆನೆಯುತ್ತಾ ಭವಿಷ್ಯದ ಬಗ್ಗೆ ಚಿಂತಿಸುತ್ತ ವರ್ತಮಾನದಲ್ಲಿ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುತ್ತಿರುವವರಿಗೆ ಇಲ್ಲಿನ ಬರಹ ಹೆಣ್ಣಿನ ಮಹತ್ವವನ್ನು ಪರಿಚಯಿಸುತ್ತದೆ. 'ಹೆಣ್ಣು ಮಕ್ಕಳೇಕೆ ಬೇಡ?' ಎಂಬ ಅಂಕಣ ಬರಹವೂ ಸಹ ಸ್ತ್ರೀ ಸಂತಾನದ ಮಹತ್ವವನ್ನು ಹೇಳುತ್ತದೆ. ತಾಯಿಯಾಗಿ, ಹೆಂಡತಿಯಾಗಿ ಬೇಕಾದ ಹೆಣ್ಣು ಮಗಳಾಗಿ ಏಕೆ ಬೇಡ? ಎಂಬ ಪ್ರಶ್ನೆಯನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ಇದು ಹೆಣ್ಣಿಗೂ ಜೀವಿಸುವ, ಜನಿಸುವ ಹಕ್ಕು ಸಿಗಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಸ್ತ್ರೀ–ಪುರುಷರ ಸಮಾನತೆಯನ್ನು ಇಲ್ಲಿನ ಅಂಕಣ ಬರಹಗಳು ಸಾರುತ್ತವೆ. ಪುರುಷ ಪ್ರಧಾನ ವ್ಯವಸ್ಥೆ ರೂಪಿಸಿರುವ ಆದರ್ಶ ಸ್ತ್ರೀಯನ್ನು ಚಿತ್ರಿಸುತ್ತಲೇ ಹೆಣ್ಣಿನ ಮನೋಸ್ಥೈರ್ಯವನ್ನು ಕುಗ್ಗಿಸುವ ಸಾಮಾಜಿಕ ವ್ಯವಸ್ಥೆಯ ಮನೋಧರ್ಮವನ್ನು ತೆರೆದಿಡುತ್ತವೆ. ಒಂದೆಡೆ ಪುರುಷ ಪ್ರಧಾನ ವ್ಯವಸ್ಥೆಯ ಒಪ್ಪಿತ ನಿಲುವನ್ನು ವ್ಯಕ್ತಪಡಿಸುತ್ತಲೇ ಸ್ವಾಭಿಮಾನಿಯಾಗಿ ಬದುಕಬೇಕೆಂದು ಹೇಳುತ್ತವೆ. 'ಇಷ್ಟಾದರೂ ಪತಿ ಸರಿದಾರಿಗೆ ಬರದೆ ಪಶುವೇ ಆಗಿದ್ದಲ್ಲಿ ಪಾಲಿಗೆ ಬಂದುದು ಪಂಚಾಮೃತವೆಂದರಿತು ಕಾಲದೂಡಬೇಕು'. (ಗೃಹಿಣಿ, ಪು. ೨೧) ಪುರುಷನ ದೌರ್ಜನ್ಯದ ಜೊತೆಗಿನ ಹೊಂದಾಣಿಕೆಯ ಬದುಕನ್ನು ಈ ಮಾತುಗಳಲ್ಲಿ ಒತ್ತಾಯಿಸುತ್ತದೆ.

"ಸಹಿಸಲಸಾಧ್ಯವಾದ ಕಷ್ಟ ಕೊಟ್ಟಾಗ ವಿಚ್ಛೇದನ ಮಾಡಿಕೊಳ್ಳದೆ ಅಥವಾ ಜೀವನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳದೆ ಪತಿಯಿಂದ ಬೇರೆಯಾಗಿ ಉದ್ಯೋಗವನ್ನವಲಂಬಿಸದೆ ಆತನ ಇದಿರೇ ತನ್ನ ಕಾಲ ಮೇಲೆ ತಾನು ನಿಂತು ಮಾನವಾಗಿ ಬಾಳಬೇಕು." (ಅದೇ, ಪು. ೧೦) ನೊಂದ ಸ್ತ್ರೀಯರಿಗೆ ಆತ್ಮಸ್ಥೈರ್ಯವನ್ನು ತುಂಬುವ ಇಂತಹ ಮಾತುಗಳಿಂದ ಜೀವನ ಪ್ರೀತಿ ದೊಡ್ಡದು ಎಂಬ ನಿಲುವನ್ನು ನೋಡಬಹುದು.

'ಸ್ತ್ರೀ ಪುರುಷ ಸಮಾನತೆ' ಎಂಬ ಅಂಕಣ ಬರಹದಲ್ಲಿ "ಸೂರ್ಯನ ಬೆಳಕು ಭೂಮಿಗೆ ಹೇಗೆ ಸಮಾನವಾಗಿ ಹಂಚಿಕೆ ಆಗುತ್ತದೆಯೊ ಅದೇ ರೀತಿ ಸ್ತ್ರೀ ಪುರುಷರೀರ್ವರು ಸಮಾನರು." (ಅದೇ, ಪು. ೧೦). ಇಲ್ಲಿ ಸ್ತ್ರೀ–ಪುರುಷರು ಸಮಾನರು ಎಂಬ ದೃಷ್ಟಿಕೋನವಿದೆ. ಅದೇರೀತಿ ಗಂಡ–ಹೆಂಡತಿ ಇಬ್ಬರೂ ಉದ್ಯೋಗಸ್ಥರಾಗಿದ್ದಲ್ಲಿ ಗಂಡ ಮನೆಕೆಲಸದಲ್ಲಿ ಹೆಂಡತಿಗೆ ಸಹಕರಿಸಬೇಕು ಎಂಬ ಸಲಹೆ, ಸೂಚನೆಗಳಿವೆ. ಗಂಡು–ಹೆಣ್ಣಿನ ಮೇಲೆ ದರ್ಪ ಸಾಧಿಸದೆ ಪ್ರೀತಿ ವಾತ್ಸಲ್ಯದಿಂದ ಪರಸ್ಪರ ಸಾಮರಸ್ಯದ ಜೀವನ ಸಾಗಿಸಲು ಈ ಬರಹ ಸಲಹೆ ನೀಡುತ್ತದೆ. ಸಣ್ಣ–ಪುಟ್ಟ ಕಾರಣಗಳಿಗೆ ವಿಚ್ಛೇದನದವರೆಗೂ ತೆರಳದೆ ಜೀವನವನ್ನು ಹೇಗೆ ಸರಿದೂಗಿಸಿಕೊಳ್ಳಬೇಕು, ಪ್ರೀತಿ, ಬಾಂಧವ್ಯವನ್ನು ಹೇಗೆ ಜೋಪಾನ ಮಾಡಿಕೊಳ್ಳಬೇಕು ಎಂದು ತಿಳಿಸಿಕೊಡುತ್ತವೆ ಸಾಮರಸ್ಯವೇ ಜೀವನ ಎಂಬುದನ್ನು ಸಾರುತ್ತವೆ.

ಮಹಿಳೆಯರ ನಡವಳಿಕೆಗಳ ವಿವಿಧ ಆಯಾಮಗಳನ್ನು ಇಲ್ಲಿನ ಲೇಖನಗಳ ಹೆಸರುಗಳು ಸೂಕ್ತವಾಗಿ ಸೂಚಿಸುತ್ತದೆ. 'ಹೆಣ್ಣು ಮಾಯಾಂಗನೆಯಲ್ಲ ಜೀವಾಳದ ಉಸಿರು', 'ಮನೋವಿಕಾಸಕ್ಕೆ ಮಹಿಳಾ ಸಮಾಜವೇ ಬುನಾದಿ', 'ಸ್ತ್ರೀ ಪುರುಷರ ಸಮಾನತೆ', 'ಮಹಿಳೆಯ ಸ್ಥಾನ', ಮಕ್ಕಳ ಶಿಸ್ತು ಮಾತೆಯ ಪಾತ್ರ', 'ಹೆಣ್ಣು ಅವಳ ನಡೆ–ನುಡಿ' ಮುಂತಾದ ಶೀರ್ಷಿಕೆಗಳು ಮಹಿಳೆಯ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಮನೆ–ಮಂದಿಯೊಡನೆ ಇರುವ ಬಾಂಧವ್ಯ, ಅವಿಭಕ್ತ ಕುಟುಂಬದ ಉಪಯೋಗಗಳು, ಸ್ತ್ರೀಯರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ತಮ್ಮ ಕ್ರಿಯಾಶೀಲತೆಯನ್ನು ಉಪಯೋಗಿಸಿಕೊಳ್ಳಲು ಈ ಬರಹಗಳು ಮಾರ್ಗದರ್ಶನ ನೀಡುತ್ತವೆ.

ಇಲ್ಲಿನ ಬಹುತೇಕ ಅಂಕಣ ಬರಹಗಳ ಶೀರ್ಷಿಕೆಗಳು ಪ್ರಶ್ನಾರ್ಥಕವಾಗಿವೆ. 'ಮಲತಾಯಿಯ ಬಗ್ಗೆ ತಾತ್ಸಾರವೇಕೇ?', 'ನೆರೆಹೊರೆಯವರೊಂದಿಗೆ ವರ್ತಿಸುವುದೆಂತು?', 'ಅತ್ತೆ–ಸೊಸೆ ಅನ್ಯೋನ್ಯವಾಗಿರಬಲ್ಲರೇ?', 'ಸ್ತ್ರೀ ಸ್ನೇಹಮಯಿಯೇ?', 'ಸ್ತ್ರೀ ಅವಿವಾಹಿತೆಯಾಗಿರಬಲ್ಲಳೆ?' 'ಹೆಣ್ಣೆಂದರೆ ತಾತ್ಸಾರವೇಕೆ?', 'ಹಬ್ಬಗಳನ್ನು ಆಚರಿಸುವುದೆಂತು?', 'ವಿದ್ಯಾವಂತರು ಅವಿದ್ಯಾವಂತರಂತೆ ವರ್ತಿಸುವುದು ಸರಿಯೆ?', 'ಹೆಣ್ಣಿನ ನಾಲಗೆ ಉದ್ದವೆ?' ಈ ಶೀರ್ಷಿಕೆಗಳಲ್ಲಿ ಎತ್ತಿರುವ ಪ್ರಶ್ನೆಗಳು ವ್ಯವಸ್ಥೆಯ ಪೂರ್ವಗ್ರಹ ಪೀಡಿತ ದೃಷ್ಟಿಕೋನವನ್ನು ಪ್ರಶ್ನಿಸುತ್ತವೆ. ಅತ್ತೆ–ಸೊಸೆಯರ ಅನ್ಯೋನ್ಯ ಜೀವನವನ್ನು ಉದಾಹರಣೆ ನೀಡುತ್ತಾ ಅತ್ತೆ–ಸೊಸೆಯರು ಅನ್ಯೋನ್ಯವಾಗಿರಬಲ್ಲರು ಅವರನ್ನು ಅನುಮಾನಿಸುವ ಅಗತ್ಯವಿಲ್ಲ ಎನ್ನುತ್ತದೆ. ಮಲತಾಯಿ ಮಲಮಕ್ಕಳಲ್ಲಿ ಹೊಂದಿರುವ ಪ್ರೀತಿ–ವಾತ್ಸಲ್ಯಗಳನ್ನು ಪುರಾಣದ ಯಶೋಧೆಯ ಉದಾಹರಣೆ ನೀಡುತ್ತಾ ಸಕಾರಾತ್ಮಕ ಧೋರಣೆಗಳನ್ನು ಜೀವನದಲ್ಲಿ ಬೆಳಸಿಕೊಂಡಾಗ ಎಲ್ಲಾ ಪ್ರಶ್ನೆಗಳಿಗೂ ಉತ್ತರ ದೊರೆಯುತ್ತವೆ ಎಂಬುದನ್ನು ಸಾದರಪಡಿಸಿವೆ.

**ಸಂಸಾರದ ಕೇಂದ್ರ ಬಿಂದು ಹೆಣ್ಣು**

ಸಂಸಾರದಲ್ಲಿ ಹೆಣ್ಣಿನ ಪಾತ್ರ ಮಹತ್ವವಾದದ್ದು. ಸಂಸಾರದ ಆಧಾರವೇ ಹೆಣ್ಣು. ಮಗಳಾಗಿ, ಸಹೋದರಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತಿಗೆಯಾಗಿ, ಎಲ್ಲಾ ಸಂಬಂಧಗಳನ್ನು ಸಂಭಾಳಿಸಬೇಕು. ಉದ್ಯೋಗಸ್ಥೆಯಾಗಿದ್ದರೆ ಈ ಜವಾಬ್ದಾರಿಗಳ ಜೊತೆಗೆ ಗೃಹಕೃತ್ಯಗಳನ್ನು ನಿರ್ವಹಿಸಿಕೊಂಡು ಹೋಗಬೇಕಾಗುತ್ತದೆ. ಗೃಹಿಣಿಯ ಯಶಸ್ಸು ಅವಳಿರುವ ಕುಟುಂಬದ ಯಶಸ್ಸಿನಲ್ಲಿ ಅಡಗಿದೆ.

ಇಲ್ಲಿನ ಅನೇಕ ಅಂಕಣ ಬರಹಗಳು ಮನೆಯಲ್ಲಿ ಮಹಿಳೆ ನಿರ್ವಹಿಸುವ ಪಾತ್ರದ ಮೇಲೆ ಬೆಳಕು ಚೆಲ್ಲುತ್ತವೆ. ಅತ್ತೆ–ಮಾವ, ಗಂಡ–ಮಕ್ಕಳ ಶುಶ್ರೂಷೆ ಮಾಡುವ ಶುಶ್ರೂಷಕಿ, ಮಕ್ಕಳಿಗೆ ಶಿಸ್ತು ಕಲಿಸುವ ಶಿಕ್ಷಕಿಯಾಗಿ, ಗಂಡನಾದಿಯಾಗಿ ಮನೆಯ ಎಲ್ಲರ ಸಿಟ್ಟನ್ನು ಸಹಿಸಿಕೊಳ್ಳುವ ತಾಳ್ಮೆ, ಸಹನೆ ಪ್ರೀತಿಯ ಒರತೆ ಹೆಣ್ಣು. ಹೆಣ್ಣಿನ ಜೀವನದ ನೈತಿಕ ಮೌಲ್ಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಗೃಹಿಣಿ ಎಂದು ತಾತ್ಸಾರಕ್ಕೆ ಒಳಗಾಗಿರುವ ಸಾಮಾನ್ಯ ಮಹಿಳೆಯಲ್ಲಿರುವ ಮಹತ್ವದ ಗುಣಗಳನ್ನು ಪರಿಚಯಿಸುತ್ತವೆ.

'ಗೃಹಿಣಿ' ಅಂಕಣ ಬರಹವು ಗೃಹಿಣಿಯರಿಗೆ ಒಂದು ಬಗೆಯ ಕೈಪಿಡಿಯಾಗಿದೆ. ಈ ಕೃತಿ ಗೃಹಿಣಿಯರಿಗೆ ಸಂಬಂಧಿಸಿದ ಹಲವಾರು ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುವುದು ಗೃಹಿಣಿಯರು ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಬದುಕುವ ಮಾರ್ಗಗಳ ಬಗ್ಗೆ ಪರಿಚಯ, ಗೃಹಿಣಿ ಆರೋಗ್ಯವಂತಳಾಗಿ ಸೌಂದರ್ಯವನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸುತ್ತವೆ. ಸ್ತ್ರೀ ಕುಟುಂಬದ ಚೌಕಟ್ಟಿನ ಒಳಗೆ ಇದ್ದುಕೊಂಡು ಆಧುನೀಕರಣಗೊಳ್ಳುವ ಬಗ್ಗೆ ಹಾಗೂ ಅದರ

ಅಗತ್ಯತೆಯನ್ನು ಹೇಳುತ್ತವೆ. ಸನಾತನ ಕಾಲದಿಂದ ಹರಿದು ಬಂದಿರುವ ಒಬ್ಬ ಆದರ್ಶ ಭಾರತೀಯ ಗೃಹಿಣಿಯ ಚಿತ್ರಣವನ್ನು ಕಟ್ಟಿಕೊಡುತ್ತವೆ.

ಒಟ್ಟಾರೆಯಾಗಿ ಇಲ್ಲಿನ ಅಂಕಣ ಬರಹಗಳಲ್ಲಿ ಗಮನಕ್ಕೆ ಬರುವ ಮುಖ್ಯ ಅಂಶಗಳೆಂದರೆ, ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಸ್ತ್ರೀ ಸಮಾನತೆಯ ಅವಶ್ಯಕತೆ, ಮಹಿಳೆಗೆ ಮದುವೆಯೇ ಜೀವನದ ಗುರಿ, ಸಾಧನೆ ಎಂಬ ಸಮಾಜದ ದೃಷ್ಟಿಕೋನದಲ್ಲಿ ಆಗಬೇಕಾಗಿರುವ ಬದಲಾವಣೆ, ಸಮಾಜಸೇವೆ, ದೇಶಸೇವೆ, ಸರಳ ಹಾಗೂ ಸಾಮರಸ್ಯ ಜೀವನದ ಸಾಫಲ್ಯತೆ, ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಸಲಹೆಗಳು ಇವೇ ಮುಂತಾದ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತವೆ.

ಹೀಗೆ ಪ್ರೇಮಾಭಟ್ ಅವರ ಅಂಕಣ ಬರಹಗಳು ಆದರ್ಶ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ, ಜನರಲ್ಲಿ ಸಾಮಾಜಿಕ, ಕೌಟುಂಬಿಕ, ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆ. ಕುಟುಂಬ ಹಾಗೂ ಸಮಾಜವನ್ನು ಸುಧಾರಿಸಲು ಬೇಕಾದ ಸಿದ್ಧೌಷಧಂತಿದೆ. ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕಾದ ಜನಪರ ಕಾಳಜಿ, ಜೀವಪರ ನಿಲುವು, ಕೌಟುಂಬಿಕ ಜವಾಬ್ದಾರಿಗಳು ಪ್ರತಿಯೊಂದು ಅಂಕಣದಲ್ಲೂ ವ್ಯಕ್ತವಾಗಿವೆ. ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕಾದ ಸಾಮಾಜಿಕ ಪ್ರಜ್ಞೆಯನ್ನು ನೆನಪಿಸುವಂತೆ ಇಲ್ಲಿನ ಬರಹಗಳು ಇವೆ. ಒಟ್ಟಿನಲ್ಲಿ ಸ್ತ್ರೀ ಶೋಷಣೆಯ ವಿರುದ್ಧ ಸಿಡಿದೇಳುವ ಪ್ರೇಮಾಭಟ್ ಅವರ ಮನೋಗತ ನಿಲುವುಗಳು ಈ ಅಂಕಣ ಬರಹಗಳ ಮೂಲಕ ಅಭಿವ್ಯಕ್ತಗೊಂಡಿವೆ.

## ಪರಾಮರ್ಶನ ಗ್ರಂಥಗಳು


೧. ಗೃಹಿಣಿ – ಶ್ರೀ ಪ್ರೇಮಸಾಯಿ ಪ್ರಕಾಶನ # ೮೪೫, ಶ್ರೀ ಗುರುಪ್ರಸಾದ, ೪ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು, ೧೯೯೫, ಪ್ರ. ಮು.

೨. ಬದುಕು ಮತ್ತು ಗ್ರಹಿಕೆ – ಶ್ರೀ ಪ್ರೇಮಸಾಯಿ ಪ್ರಕಾಶನ # ೮೪೫, ಶ್ರೀ ಗುರುಪ್ರಸಾದ, ೪ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು, ೨೦೧೨, ಪ್ರ. ಮು.

೩. ಶ್ರೀಕಂಠಯ್ಯ ತಿ.ನಂ. – ನಂಟರು ಶಾರದಾ ಮಂದಿರ, ಮೈಸೂರು, ೧೯೬೩.

೪. ಶ್ರೀನಿವಾಸ ಹಾವನೂರು – ಹೊಸಗನ್ನಡ ಅರುಣೋದಯ ಮೈಸೂರು ವಿಶ್ವವಿದ್ಯಾಲಯ, ೧೯೭೪.

೫. ಶ್ರೀಮತಿ ಎಚ್.ಎಸ್. (ಸಂ.) – ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೬